**<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>**

**<u>ಅಸಲು ದಾವಾ ನಂಬ್ರ: 79/2014 ಪಿಡಬ್ಲ್ಯೂ- 1</u>**

**ದಿನಾಂಕ: 28-03-2019 ರಂದು ಸಾಕ್ಷಿಯನ್ನು ಪುನಹ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು**

**<u>ಮುಂದುವರಿದ ಪಾಟಿ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಜೆ.ಎಸ್. ರವರಿಂದ</u>**

ನಾನು ಈ ದಾವೆಯಲ್ಲಿ ಕೇಳಿದ ದಂಡವನ್ನು 1 ರಿಂದ 4 ನೇ ಪ್ರತಿವಾದಿಯರು ಸೇರಿ ಕೊಡಬೇಕು. ನಿಪಿ-1 ರಿಂದ 3 ರಲ್ಲಿ ಹೇಳಿದ ಪ್ರಕರಣಗಳನ್ನು ನನ್ನ ವಿರುದ್ದ ದಾಖಲಿಸಿದ ಕಾರಣ ಮತ್ತು ಅದರಿಂದ ನನಗೆ ತೊಂದರೆಯಾದ ಕಾರಣ ಪ್ರತಿವಾದಿಯರು ನನಗೆ ದಂಡವನ್ನು ಕೊಡಬೇಕು. ಪ್ರತಿವಾದಿ-3 ಮತ್ತು 4 ರವರು ಕ್ರಮವಾಗಿ ಅಧ್ಯಕ್ಷರು ಮತ್ತು ಪಂಚಾಯತ್ ಸದಸ್ಯರಾಗಿ ಗ್ರಾಮ ಪಂಚಾಯತ್ ಪರವಾಗಿ ನಿಪಿ-1 ರಿಂದ ನಿಪಿ-3 ರ ಪ್ರಕರಣಗಳನ್ನು ದಾಖಲಿಸಿದ್ದರು. ನಿಪಿ-5 ರ ನೋಟೀಸನ್ನು ನಾನು 3 ಮತ್ತು 4 ನೇ ಪ್ರತಿವಾದಿ ಯರಿಗೆ ವೈಯಕ್ತಿಕ ನೆಲೆಯಲ್ಲಿ ಕಾಣಿಸುತ್ತದೆ ಎಂದರೆ ಸರಿ. ಅವರಿಬ್ಬರಿಗೂ ಸಹಾ ಈ ಮೇಲೆ ಹೇಳಿದ ಪ್ರಕರಣಗಳಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿ ಇರಲಿಲ್ಲ ಎಂದರೆ ಸಾಕ್ಷಿ ವೈಯಕ್ತಿಕ ಹಿತಾಸಕ್ತಿ ಇರಲಿಲ್ಲ, ವೈಯಕ್ತಿಕ ದುರುದ್ದೇಶ ಇತ್ತು ಎಂದು ನುಡಿಯುತ್ತಾರೆ. ಆ ವಿಚಾರವನ್ನು ನಿಪಿ-5 ರ ನೋಟೀಸ್ ನಲ್ಲಾಗಲೀ ಅಥವಾ ದಾವಾ ಪತ್ರದಲ್ಲಾಗಲೀ ಕಾಣಿಸಿರುವುದಿಲ್ಲ, ಈ ದಿನ ಪ್ರಥಮವಾಗಿ ನಾನು ಹೇಳುತ್ತಿದ್ದೇನೆ.

ಈ ದಾವೆಯಾಗುವ ಪೂರ್ವ ದಲ್ಲಿ ಪ್ರತಿವಾದಿ-1 ಮತ್ತು 2 ರವರಿಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಕಾನೂನುಬದ್ದ ನೋಟೀಸನ್ನು ನೀಡಿದ್ದೇನೆ. ಸದ್ರಿ ನೋಟೀಸನ್ನು ನಾನು ವಕೀಲರ ಮೂಲಕ ನೀಡಿರುತ್ತೇನೆ. ಸದ್ರಿ ನೋಟೀಸ್ 1 ಮತ್ತು 2 ನೇ ಪ್ರತಿವಾದಿಯರಿಗೆ ಜಾರಿಯಾಗಿರುತ್ತದೆ. ಆ ಬಗ್ಗೆ ಕಚೇರಿ ಪ್ರತಿ ಮತ್ತು ಅಂಚೆ ಸ್ವೀಕೃತಿ ನನ್ನ ಹತ್ತಿರ ಇದೆ. ಅದನ್ನು ಈ ಪ್ರಕರಣದಲ್ಲಿ ಹಾಜರುಮಾಡದೇ ಇರಲು ಕಾರಣ ಇದೆಯಾ ಎಂದರೆ ಸಾಕ್ಷಿ ನಾನು ಅದನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಅಂತಹಾ ಯಾವುದೇ ಕಾನೂನುಬದ್ದ ನೋಟೀಸನ್ನು ಪ್ರತಿವಾದಿ-1 ಮತ್ತು 2 ರವರಿಗೆ ನೀಡಿಲ್ಲ ಮತ್ತು ಆ

ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ಹೇಳಿದ ನಿರ್ಣಯ ಸಂಖ್ಯೆ-8 ಅನ್ನು ಈಗ ಸಾಕ್ಷಿ ಗುರುತಿಸಿದ್ದರಿಂದ ಸದ್ರಿ ಭಾಗವನ್ನು ನಿಪಿ-8 ಎ ಎಂದು ಗುರುತಿಸಲಾಯಿತು. ನನಗೆ ಮಂಜೂರಾದ ಆಸ್ತಿ ಇರುವ ವಾರ್ಡ್ ಸದಸ್ಯರಾಗಿ ಆ ಸಮಯ ಮೂರನೇ ಪ್ರತಿವಾದಿ ಇದ್ದರು. ನಿಪಿ-1 ರಿಂದ 3 ರ ಪ್ರಕರಣಗಳನ್ನು ಗ್ರಾಮ ಪಂಚಾಯತ್ ನಿಪಿ-8 ಎ ರಲ್ಲಿ ಕೈಗೊಂಡ ನಿರ್ಣಯದಂತೆ 3 ಮತ್ತು 4 ನೇ ಪ್ರತಿವಾದಿಯರು ದಾಖಲು ಮಾಡಿರುತ್ತಾರೆ ಎಂದರೆ ಇರಬಹುದು. ಆ ನಿರ್ಣಯವನ್ನು ಮೇಲ್ಮನವಿಯನ್ನು ಸಲ್ಲಿಸಿ ಪ್ರಶ್ನೆ ಮಾಡಿರುವುದಿಲ್ಲ. ದಿಃ 17-07-1998 ಕ್ಕೆ ಸಂಬಂಧಿಸಿದಂತೆ ಇದೇ ದಾವಾ ವಿಷಯಕ್ಕೆ ನಿರ್ಣಯ ಆಗಿತ್ತು ಎಂದರೆ ನನ್ನ ಗಮನಕ್ಕೆ ಬಂದಿಲ್ಲ. ನನಗೆ ಮಂಜೂರಾದ ಸ್ಥಳದ ಮೇಲೆ ನನ್ನ ಪರ ಮಂಜೂರು ಮಾಡಿದ್ದಕ್ಕೆ ಸಾರ್ವಜನಿಕರಿಂದ ಅಕ್ಷೇಪ ಬಂದ ವಿಚಾರ ನನಗೆ ಮುಂಚೆ ಗೊತ್ತಿರಲಿಲ್ಲ ಈಗ ಗೊತ್ತಿದೆ. ಸಾರ್ವಜನಿಕರು ಪಂಚಾಯತ್ ಗೆ ನೀಡಿದ ಆಕ್ಷೇಪಣಾ ಪತ್ರವನ್ನು ಈಗ ಪಡೆದುಕೊಂಡಿರುತ್ತೇನೆ. ಈ ದಾವೆ ಸಲ್ಲಿಸುವಾಗ ಆ ಕುರಿತು ಮಾಹಿತಿ ನೀಡಿರುವುದಿಲ್ಲ. ಸಾರ್ವಜನಿಕರಿಂದ ಬಂದ ಆಕ್ಷೇಪಣೆಯನ್ನು ಆಧರಿಸಿ ಒಂದನೇ ಪ್ರತಿವಾದಿ ಗ್ರಾಮ ಪಂಚಾಯತ್ ನವರು ನಿರ್ಣಯವನ್ನು ಕೈಗೊಂಡರು ಎಂದರೆ ಇದ್ದಿರಬಹುದು. ಸದ್ರಿ ಸ್ಥಳ ಸಾರ್ವಜನಿಕ ಉದ್ದೇಶಕ್ಕೆ ಬೇಕು ಎಂದು ಮತ್ತು ಆ ಸ್ಥಿರಾಸ್ತಿಯನ್ನು ನನ್ನ ಪರ ಮಂಜೂರು ಮಾಡುವುದು ತಪ್ಪು ಎಂದು ಪಂಚಾಯತ್ ನವರ ಉದ್ದೇಶ ಆಗಿತ್ತು ಎಂದರೆ ಇದ್ದಿರಬಹುದು. ನಾನು ರಾಜಕೀಯ ಪ್ರಭಾವವನ್ನು ಬಳಸಿಕೊಂಡು ಅಕ್ರಮವಾಗಿ ಸ್ಥಿರಾಸ್ತಿಯ ಮಂಜೂರಾತಿಯನ್ನು ಪಡೆದು ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ಆಸ್ತಿಯನ್ನು ಪಡೆಯಲು ಅನರ್ಹನಾಗಿದ್ದರೂ ಸಹಾ ಪಡೆದು ಕೊಂಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಬದ್ಧ ಕಾರಣಗಳಿಗಾಗಿ ಒಂದನೇ ಪ್ರತಿವಾದಿ ಗ್ರಾಮ ಪಂಚಾಯತ್ ರವರು ಮಂಜೂರು ಮಾಡುವುದನ್ನು ಮತ್ತು ಮಂಜೂರು ಮಾಡಿದ ಕ್ರಮವನ್ನು ಸಂಬಂಧಿತ ಪ್ರಾಧಿಕಾರದಲ್ಲಿ ಪ್ರಶ್ನೆ ಮಾಡಿರುತ್ತಾರೆ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯರು ಗ್ರಾಮ ಪಂಚಾಯತ್ ಜನಪ್ರತಿನಿಧಿ ಗಳಾಗಿ ಒಂದನೇ ಪ್ರತಿವಾದಿಯ ಪರವಾಗಿ ಕಾನೂನು ಹೋರಾಟವನ್ನು ಮಾಡಿರುತ್ತಾರೆ ಎಂದರೆ ಇದ್ದಿರಬಹುದು. ಪ್ರತಿವಾದಿಯರಿಗೆ ತೊಂದರೆ ಮಾಡಲು ದುರುದ್ದೇಶಪೂರಕವಾಗಿ ಮತ್ತು ಅನಗತ್ಯವಾಗಿ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ಪಂಚಾಯತ್ ನವರು ಕಾನೂನು ಪ್ರಕಾರವಾಗಿ ಮಾಡಿದ ಕಾನೂನು ಹೋರಾಟದಿಂದ ನನಗೆ ಯಾವುದೇ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರ ವಿರುದ್ದ ಈ ದಾವೆಯಲ್ಲಿ ಕೇಳಿದ ಯಾವುದೇ ಪರಿಹಾರವನ್ನು ಪಡೆಯಲು ನಾನು ಯೋಗ್ಯನಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ವಿರುದ್ದವಾಗಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಮಾಡಲು ಮತ್ತು ಅದರಿಂದ ವಿಕೃತ ಆನಂದ ಹೊಂದಲು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದಂಡನೆ ಕೊಡಲು ನಾನು ಬದ್ದ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ